ಇ. ನಷ್ಟಕ್ಕೆ ಕಾರಣಗಳೇನು ?

ಈ. ಈ ಹೋಟೆಲುಗಳಲ್ಲಿ ಅಲ್ಪ ಪ್ರಮಾಣದಲ್ಲಿ ವಾಸ್ತವ್ಯ ನಿಜವೇ ?

ಉ. ಈ ಹೋಟೆಲುಗಳಲ್ಲಿನ ದರಗಳು ದುಬಾರಿ ಎಂಬುದು ಸರ್ಕಾರಕ್ಕೆ ತಿಳಿದಿದೆಯೇ ?

ಊ. ಈ ಹೋಟೆಲುಗಳನ್ನು ಖಾಸಗಿಯವರಿಗೆ ಮಾರುವ ಪ್ರಸ್ತಾವನೆ ಏನಾದರೂ ಇದೆಯೆ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಲೆಕ್ಕ ತನಿಖೆಯ ಪರಿಪತ್ರಗಳನ್ನು ನಿರೀಕ್ಷಿಸಲಾಗುತ್ತಿದೆ.

ಆ. ಹೌದು. 1986–87ನೇ ವಾರ್ಷಿಕ ವರ್ಷದಿಂದ ಲಾಭದಲ್ಲಿದೆ. (ತಾತ್ಕಾಲಿಕ ಲೆಕ್ಕದ ಪ್ರಕಾರ)

ಇ. ಉದ್ಭವಿಸುವುದಿಲ್ಲ.

ಈ. ಹೌದು, (ಕೆಲವು ಹೋಟೆಲುಗಳಲ್ಲಿ)

ಉ. ಇಲ್ಲಾ.

ಊ. ಇಲ್ಲಾ.

ತಿರುಮಲ ಬೆಟ್ಟದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಹೋಟೆಲ್.

512 (819): ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ತಿರುಮಲ ಬೆಟ್ಟದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲ್ ಇದೆಯೆ ?

ಬಿ. ಹಾಗಾದರೆ ಒಟ್ಟು ಎಷ್ಟು ಕೊಠಡಿಗಳಿವೆ ?

ಸಿ. ಪ್ರತಿ ಕೊಠಡಿಗೆ ನಿಗದಿಪಡಿಸಿದ ಬಾಡಿಗೆ ದರ (ಒಂದು ಮತ್ತು ಎರಡು ಹಾಸಿಗೆಗೆ ಹಾಗೂ ಇತರೆ ವಿವರಗಳೊಂದಿಗೆ):

ಡಿ. ಇಲ್ಲಿನ ಕೊಠಡಿಗಳನ್ನು ಕಾದಿರಿಸಲು ಬೆಂಗಳೂರಿನಲ್ಲಿ ವ್ಯವಸ್ಥೆ ಇದೆಯೇ ?

ಇ. ಜನವರಿ 1992ರಿಂದ ಡಿಸೆಂಬರ್ 1992ರವರೆಗೆ ಒಟ್ಟು ಗಳಿಸಿದ ಆದಾಯ ?

ಎಫ್. ಇದೇ ಸಮಯದಲ್ಲಿ ಆದ ಒಟ್ಟು ಖರ್ಚು ?

ಜಿ. ಈ ಘಟಕವು ಲಾಭಗಳಿಸುತ್ತಿದೆಯೇ ಅಥವಾ ನಷ್ಟಹೊಂದುತ್ತಿದೆಯೇ ?

ಹೆಚ್. ಕರ್ನಾಟಕದ ಜನತೆಗೆ ಈ ಹೋಟೆಲ್‌ನಲ್ಲಿ ಆದ್ಯತೆ ಕೊಡುತ್ತಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಆ. ಇದೆ.

ಬಿ. ಎರಡು ಹಾಸಿಗೆಗಳಿರುವ 34 ಕೊಠಡಿಗಳಿವೆ.

ಸಿ. ಒಬ್ಬರಿಗೆ – ರೂ. 50–00
ಇಬ್ಬರಿಗೆ – ರೂ. 60–00

ಡಿ. ಇದೆ.

ಇ. ರೂ. 5,23,390–00

ಎಫ್. ರೂ. 3,92,315–00

ಜಿ. ಲಾಭ ಗಳಿಸುತ್ತಿದೆ.

ಹೆಚ್. ಇಲ್ಲ

ಮತೀಯ ಗಲಭೆಯಲ್ಲಿ ಸಂತ್ರಸ್ತರಾದವರಿಗೆ ಪುನರ್ ವಸತಿ ಸೌಲಭ್ಯ

515 (766): ಶ್ರೀ ಎ. ಎಂ. ಹಿಂಡುಸಗೇರಿ (ಹುಬ್ಬಳ್ಳಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ. ಮತೀಯ ಗಲಭೆಯಲ್ಲಿ ಸಂತ್ರಸ್ತರಾದ ಎಲ್ಲರಿಗೂ ಪುನರ್‌ವಸತಿ ಸೌಲಭ್ಯ ನೀಡಲಾಗಿದೆಯೇ ? (ಜಿಲ್ಲಾವಾರು ವಿವರ ನೀಡುವುದು)

ಆ. ಮತೀಯ ಗಲಭೆಯ ಸಂತ್ರಸ್ತರಿಗೆ ಪುನರ್‌ವಸತಿ ಯೋಜನೆಯನ್ವಯ ಉಚಿತ ನಿವೇಶನ: ಮನೆ ಹಂಚುವ ಪ್ರಸ್ತಾವನೆ ಇದೆಯೇ ?

ಇ. ಹಾಗಿದ್ದಲ್ಲಿ ಅಂತಹ ಹಂಚಿಕೆಗೆ ಗುರಿಯನ್ನು ಗೊತ್ತುಪಡಿಸಲಾಗಿದೆಯೇ ? (ಜಿಲ್ಲಾವಾರು ವಿವರ ನೀಡುವುದು) ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಆ. ಮತೀಯ ಗಲಭೆಗಳಲ್ಲಿ ನೊಂದ ಜನರಿಗೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 725 ಎಸ್‌ಎಸ್‌ಟಿ 90 ದಿನಾಂಕ 10.10.1990ರ ಮೇರೆಗೆ ಎಕ್ಸ್–ಗ್ರೇಷಿಯಾ ಪರಿಹಾರ ನೀಡಲು ಅವಕಾಶ ಇದೆ. ಈ ಕಾರ್ಯ ಪ್ರಗತಿಯಲ್ಲಿದ್ದು, ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೋಡಬಹುದು.

ಆ. ಮತೀಯ ಗಲಭೆಗಳಲ್ಲಿ ಮನೆ ಕಳೆದುಕೊಂಡ ದುರ್ಬಲ ವರ್ಗದವರಿಗೆ ಗ್ರಾಮೀಣ ವಸತಿ ಯೋಜನೆ ಅಡಿಯಲ್ಲಿ ಉಚಿತ ನಿವೇಶನ ನೀಡಲು ಅವಕಾಶ ಇದೆ.

ಇ. ಈ ಕಾರ್ಯಕ್ಕೆ ಗುರಿ ಗೊತ್ತುಪಡಿಸಲಾಗುವುದಿಲ್ಲ.